# ದೈಹಿಕ ಮತ್ತು ಆರೋಗ್ಯ ಶಿಕ್ಷಣ

## ಅಧ್ಯಾಯ-1 ದೈಹಿಕ ಶಿಕ್ಷಣದ ಇತಿಹಾಸ

## 1.1 ಪುರಾತನ ಗ್ರೀಕ್ ನಲ್ಲಿ ದೈಹಿಕ ಶಿಕ್ಷಣ –ಸ್ಪಾರ್ಟ ಮತ್ತು ಅಥೇನ್ಸ್

### ಗ್ರೀಕ್ ದೇಶ...

- ಯುರೋಪಿಯನ್ ರಾಷ್ಟ್ರಗಳ ನಾಗರೀಕತೆಯ ತೊಟ್ಟಿಲೆಂದು ಪರಿಗಣಿಸಲಾಗಿದೆ.
- ಭೌಗೋಲಿಕ ದೃಷ್ಟಿಯಿಂದ ಇದು ಉದ್ದಗಲತೆಯಲ್ಲಿ ಚಿಕ್ಕದಾಗಿದ್ದರೂ ಅನೇಕ ನಡುಗಡ್ಡೆ ಹಾಗೂ ನಗರರಾಜ್ಯಗಳನ್ನು ಹೊಂದಿದೆ.
- ಕಲೆ, ಸಂಗೀತ, ಶಿಕ್ಷಣ, ಗಣಿತ, ಜ್ಯೋತಿಷ್ಯಶಾಸ್ತ್ರ, ಶಿಲ್ಪಕಲೆ, ಖಗೋಳಶಾಸ್ತ್ರ, ತತ್ವಜ್ಞಾನ, ವಿಜ್ಞಾನ, ವೈದ್ಯಕೀಯಶಾಸ್ತ್ರ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳಲ್ಲಿ ಅಭಿವೃದ್ಧಿಯನ್ನು ಹೊಂದಿದೆ.
- ಸಾಕ್ರೆಟಿಸ್, ಪ್ಲೆಟೋ, ಅರಿಸ್ಟಾಟಲ್, ಅಲೆಕ್ಸಾಂಡರ್, ಹಿಪೋಕ್ರಿಟಿಸ್ ಮುಂತಾದ ವಿಶ್ವವಿಖ್ಯಾತ ತತ್ವಜ್ಞಾನಿಗಳನ್ನು ಕಾಣಿಕೆಯಾಗಿ ನೀಡಿದ ಕೀರ್ತಿ ಗ್ರೀಕ್ ದೇಶಕ್ಕೆ ಸಲ್ಲುತ್ತದೆ.
- ಗ್ರೀಕ್ ಜನತೆಗೆ ಕ್ರೀಡೆಗಳು 'ಮರಗಳಿಗೆ ಎಲೆ ಬಳ್ಳಿಗಳಿರುವಂತೆ, 'ತಾಯಿಗೆ ಮಕ್ಕಳಿರುವಂತೆ, ಜೀವನದ ಪ್ರಮುಖ ಅವಿಭಾಜ್ಯ ಅಂಗಗಳಾಗಿದ್ದವು.

## ಗ್ರೀಕ್ ದೇಶ ...

- ಗ್ರೀಕರಿಗೆ ಕ್ರೀಡೆಗಳ ಬಗ್ಗೆ ಹೆಚ್ಚಿನ ಒಲವು ಮೂಡಲು ಆ ದೇಶದ ಬೌಗೋಲಿಕ ಪರಿಸರವೇ ಕಾರಣವಾಗಿದೆ– ಕಡಿದಾದ ಬೆಟ್ಟಗಳು, ಸಮುದ್ರ, ಖಣಿವೆ ಮುಂತಾದ ನೈಸರ್ಗಿಕ ಕ್ಷೇತ್ರಗಳಿಂದ ಹಾಗೂ ಅಲ್ಪಾವಧಿಯ ಚಳಿಗಾಲ – ದೀರ್ಘಾವಧಿಯ ಬೇಸಿಗೆಯನ್ನು ಹೊಂದಿರುವುದರಿಂದ, ಜನರಿಗೆ ಹೊರಾಂಗಣದ ಕಠಿಣ ಜೀವನ ನಡೆಸಲು ದೈಹಿಕವಾಗಿ ಸಾಕಷ್ಟು ಕಾರ್ಯಕ್ಷಮತೆಯನ್ನು ಪಡೆದುಕೊಂಡಿದ್ದರು.
- ಅಧಿಕ ಜನಸಂಖ್ಯೆಯನ್ನು ಹೊಂದಿರದ, ಚಿಕ್ಕ ಚಿಕ್ಕ ರಾಜ್ಯದಿಂದ ಕೂಡಿತ್ತು.
- ಈ ರಾಜ್ಯಗಳ ಪ್ರಮುಖ ವೃತ್ತಿ **ದಾಳಿಮಾಡುವುದು** ಮತ್ತು **ಬೇಸಾಯ.**
- ಗ್ರೀಕ್ ರಾಜ್ಯಗಳು ತಮ್ಮ ಜೀವನೋಪಾಯಕ್ಕಾಗಿ ಪದೇ ಪದೇ ದಾಳಿಮಾಡುತ್ತಿದ್ದವು. ಈ ರೀತಿಯ ದಾಳಿಗಳಿಂದ ರಕ್ಷಣೆ ಹೊಂದಲು **ದೇಹದಾರ್ಢ್ಯತೆಯ ಅಭಿವೃದ್ಧಿ** ಹಾಗೂ **ಯುದ್ಧ ನೈಪುಣ್ಯತೆಗಳ** ಬಗ್ಗೆ ತರಬೇತಿ ನೀಡುವ ಸಲುವಾಗಿ ದೈಹಿಕ ಶಿಕ್ಷಣ ಕಾರ್ಯಕ್ರಮಗಳನ್ನು ರಚಿಸುತ್ತಿದ್ದರು.

## ಸ್ಪಾರ್ಟಾ ದಲ್ಲಿ ದೈಹಿಕ ಶಿಕ್ಷಣ :

- ಇದು ಗ್ರೀಕ್ ದೇಶದ ಹಲಾವರು ರಾಜ್ಯಗಳಲ್ಲೊಂದು.
- ಇಲ್ಲಿನ ಸರ್ಕಾರದ ಆಡಳಿತ ಚಕ್ರಾಧಿಪತ್ಯಕೆ ವಳಪಟ್ಟಿತ್ತು.
- ಸರ್ಕಾರದ ಪ್ರಮುಖ ಉದ್ದೇಶ ಕೇವಲ ಸೈನಿಕ ಶಕ್ತಿಯನ್ನು ಬಲಗೊಳಿಸುವುದಾಗಿತ್ತು.
- ರಾಜನಿಷ್ಠೆ, ಸ್ವಾಮಿಭಕ್ತಿ ಹೊಂದಾಣಿಕೆಯೇ ರಾಜಕೀಯ ಸಿದ್ಧಾಂತವಾಗಿತ್ತು.
- ವೈಯಕ್ತಿಕ ಜೀವನಕ್ಕೆ ಅವಕಾಶ ವಿಲ್ಲದಂತೆ ನಾಗರೀಕರಿಗೆ ಕಠಿಣ ನಿಯಮಗಳನ್ನು ಬಲವಂತವಾಗಿ ಜಾರಿಗೊಳಿಸುತ್ತಿದ್ದರು.
- ಹುಟ್ಟಿದ ಪ್ರತಿಯೊಂದು ಮಗುವಿನ ದೇಹಧಾರ್ಢ್ಯತೆ ಪರೀಕ್ಷೆ ನಡೆಸಲಾಗುತ್ತಿತ್ತು.
- ಜನಿಸದ ಮಗು ಆರೋಗ್ಯವಗಿದ್ದರೆ ಆ ಮಗುವನ್ನು ಟೈಗೆಟ್ಸ್  ಎಂಬ ಬೆಟ್ಟದ ಮೇಲೆ ಬಿಡುತ್ತಿದ್ದರು. ಮಗು ಎರಡು ದಿನಗಳ ನಂತರ ಬದುಕುಳಿದರೆ ಪಾಲಕರಿಗೆ ಒಪ್ಪಿಸಿ ಪಾಲನೆಗೆ ಅವಕಾಶ ನೀಡುತ್ತಿದ್ದರು.

## ಸ್ಪಾರ್ಟಾದಲ್ಲಿ ದೈಹಿಕ ಶಿಕ್ಷಣ :

**ಸ್ಪಾರ್ಟಾದ ನಾಗರೀಕರ ಜೀವನಕ್ಕೆ ಸಂಬಧಿಸಿದ ವಿವಿಧ ಹಂತಗಳು:**

- **ಬಾಲ್ಯ ಜೀವನ – ( ಹುಟ್ಟಿನಿಂದ 7 ವರ್ಷದವರೆಗೆ )**
- **ವಿದ್ಯಾರ್ಥಿ ಜೀವನ – ( 7 ವರ್ಷದಿಂದ 18 ವರ್ಷದವರೆಗೆ )**
- **ಸೈನಿಕ ಜೀವನ – ( 18 ವರ್ಷದಿಂದ 30 ವರ್ಷದವರೆಗೆ )**
- **ನಾಗರೀಕ ಜೀವನ – ( 30 ವರ್ಷದಿಂದ 50 ವರ್ಷದವರೆಗೆ )**
- **ನಿವೃತ್ತ ಜೀವನ – ( 50 ವರ್ಷದಿಂದ 60 ವರ್ಷದವರೆಗೆ )**

## ಸ್ಪಾರ್ಟಾ ದಲ್ಲಿ ದೈಹಿಕ ಶಿಕ್ಷಣ :

### ಬಾಲ್ಯ ಜೀವನ – ( ಹುಟ್ಟಿನಿಂದ 7 ವರ್ಷದವರೆಗೆ ) :

- ಮಗು ತನ್ನ 7 ವರ್ಷದವರೆಗೆ ಪಾಲಕರ ಪೋಷಣೆಯಲ್ಲಿ ಬೆಳೆಯುತ್ತಿತ್ತು.
- ತಾಯಿ ತನ್ನ ಮಗುವಿಗೆ ಮಾತೃವಾತ್ಸಲ್ಯವನ್ನು ತೋರದೆ, ಸರ್ಕಾರದಿಂದ ನೇಮಿಸಲ್ಪಟ್ಟ ದಾದಿಯರಂತೆ ನೋಡಿಕೊಳ್ಳಬೇಕಾಗಿತ್ತು.
- ಮಕ್ಕಳಿಗಿಂತ ದೇಶ ಮುಖ್ಯವಾಗಿತ್ತು. ಅದಕ್ಕಾಗಿ ವೀರರ ಕಥೆಯನ್ನು ಹೇಳುತ್ತಾ ಮಗುವಿಗೆ ಶಿಸ್ತಿನ ಜೀವನ ಕಲಿಸುತ್ತಿದ್ದರು.

## ಸ್ಪಾರ್ಟಾ ದಲ್ಲಿ ದೈಹಿಕ ಶಿಕ್ಷಣ :

### 2. ವಿದ್ಯಾರ್ಥಿ ಜೀವನ – ( 7 ವರ್ಷದಿಂದ 18 ವರ್ಷದವರೆಗೆ ) :

- 7 ವರ್ಷದಿಂದ ಬಾಲಕನು 'ಬ್ಯಾರಕ್' ಎಂಬ ತರಬೇತಿ ಶಾಲೆಗೆ ಕಡ್ಡಾಯವಾಗಿ ಸೇರಬೇಕಾಗಿತ್ತು.
- ಇಲ್ಲಿ ಮಕ್ಕಳನ್ನು ವಯೋಮಾನಕ್ಕನುಗುಣವಾಗಿ ವಿವಿಧ ಪಂಗಡಗಳನ್ನಾಗಿ ವಿಂಗಡಿಸಲಾಗುತ್ತಿತ್ತು.
- ಪ್ರತಿ ಪಂಗಡದಲ್ಲಿ 64 ಬಾಲಕರಿರುತ್ತಿದ್ದರು. ಇಂತ 4 ಗುಂಪುಗಳನ್ನು ಸೇರಿಸಿ ಟ್ರೂಪ್ ಎಂಬ ಹೊಸ ಪಂಗಡವನ್ನು ರಚಿಸುತ್ತಿದ್ದರು.
- ಟ್ರೂಪ್ ತಂಡದ ನಾಯಕನ್ನು ಯುರೇನ್ ಎಂದು ಕರೆಯುತ್ತಿದ್ದರು.
- ಈ ನಾಯಕರು ಪಡೋನ್ಮಸ್ ಎಂಬ ರಾಜ್ಯಾಧಿಕಾರಿಯ ಆಡಳಿತಾಧೀನಕ್ಕೆ ಒಳಪಡುತ್ತಿದ್ದರು. ಇಲ್ಲಿ ಮಕ್ಕಳು ಕಠಿಣವಾದ ಜಿವನವನ್ನು ಸಾಗಿಸುತ್ತಿದ್ದರು. ( ಕೆಳಮಟ್ಟದ ಆಹಾರ, ಕಡಿಮೆ ಬಟ್ಟೆ, ವಾಸಕ್ಕೆ ಯೋಗ್ಯವಲ್ಲದ ಕೊಠಡಿಗಳು) ಇದರ ಜೊತೆಗೆ ಕಠಿಣವಾದ ಶಿಕ್ಷೆ ನೀಡಲಾಗುತ್ತಿತ್ತು.
- ಪ್ರತಿ ನಿತ್ಯದ ದೈಹಿಕ ಚಟುವಟಿಕೆಗಳ ತರಬೇತಿಯಲ್ಲಿ ಓಡುವುದು, ಹಾರುವುದು, ಎಸೆಯುವುದು, ಕುಸ್ತಿ, ಈಜು, ಬೇಟೆ ಮುಂತಾದವುಗಳ ತರಬೇತಿ ನೀಡುತ್ತಿದ್ದರು.

## 3. ಸೈನಿಕ ಜೀವನ – ( 18 ವರ್ಷದಿಂದ 30 ವರ್ಷದವರೆಗೆ ) :

- 18 ವರ್ಷದ ನಂತರ ಯುವಕರು "ಕ್ರ್ಯಾಪಿಡಿಯಾ" ಎಂಬ ರಹಸ್ಯ ಸೇನಾಪಡೆಯಲ್ಲಿ ಸೇರ್ಪಡೆಯಾಗುತ್ತಿದ್ದರು.
- ಇಲ್ಲಿ ಸೈನಿಕರಿಗೆ ವಿಶೇಷವಾಗಿ ತೋಳು ವ್ಯಾಯಾಮಗಳಿಗೆ ಹೆಚ್ಚು ಗಮನ ನೀಡುತ್ತಿದ್ದರು.
- ಆಯುಧ ತರಬೇತಿ ನೀಡಿ ಕೃತಕ ಯುದ್ಧದ ಸನ್ನಿವೇಶಗಳನ್ನು ನಿರ್ಮಾಣಮಾಡಿ ಯುದ್ಧ ಕೌಶಲ್ಯವನ್ನು ಕಲಿಸುತತಿದ್ದರು.
- ಈ ಸೈನಿಕರು 20 ನೇ ವಯಸ್ಸಿಗೆ ಸೈನಿಕ ತರಬೇತಿ ಪಡೆದು 30 ವರ್ಷದವರೆಗೆ ಸೈನಿಕ ವೃತ್ತಿಯನ್ನು ಮಾಡಬೇಕಾಗಿತ್ತು.

## 3. ನಾಗರೀಕ ಜೀವನ– ( 30 ವರ್ಷದಿಂದ 50 ವರ್ಷದವರೆಗೆ ) :

30 ವರ್ಷದನಂತರ ಸ್ಪಾರ್ಟಾದ ನಾಗರೀಕ ಜೀವನಕ್ಕೆ ಸಂಬಂದಿಸಿದ ಅಸೆಂಬ್ಲಿಯ ಸದಸ್ಯತ್ವ ಪಡೆದು ನಾಗರೀಕರೆಂದು ಗುರುತಿಸಿ ವಿವಾಹವಾಗಲು ಒಪ್ಪಿಗೆಯನ್ನು ಪಡೆಯುತ್ತಿದ್ದರು.

ಆದರೆ ತಮ್ಮ 50 ನೇ ವರ್ಷದವರೆಗೆ ಬ್ಯಾರಕ್ ವ್ಯಾಯಾಮ ಶಾಲೇಯಲ್ಲಿ ಪ್ರತಿ ನಿತ್ಯ ಶಾರೀರಿಕ ಚಟುವಟಿಕೆಯನ್ನು ಮಾಡಬೇಕಾಗುತ್ತಿತ್ತು.

## 4. ನಿವೃತ್ತಿಯ ಜೀವನ– ( 50 ವರ್ಷದಿಂದ 60 ವರ್ಷದವರೆಗೆ ) :

50 ನೇ ವಯಸ್ಸಿಗೆ ಸೈನಿಕ ಜೀವನವನ್ನು ಬಿಟ್ಟು ಮನೆಯಲ್ಲಿ ಮುಂದಿನ ಜೀವನವನ್ನು ಕಳೆಯಬೇಕಾಗಿತ್ತು. ಈ ಸಮಯದಲ್ಲಿ ಯುದ್ಧಗಳು ನಡೆಯುವ ಸಂದರ್ಭ ಒದಗಿ ಬಂದರೆ ನಾಗರೀಕರು ಸೈನಿಕ ಜೀವನದ ಅವಧಿಯನ್ನು ಪುನಃ 10 ವರ್ಷಗಳವರೆಗೆ ವಿಸ್ಥರಣೆ ಮಾಡಲಾಗುತ್ತಿತ್ತು. ಇಲ್ಲವೆ ಕಿರಿಯರಿಗೆ ತರಬೇತಿ ನೀಡುವುದು ಕಡ್ಡಾಯವಾಗಿತ್ತು.

# ಅಥೇನ್ಸ್ ನಲ್ಲಿ ದೈಹಿಕ ಶಿಕ್ಷಣ

- ಗ್ರೀಕ್ ದೇಶದ ಸಂಸ್ಕೃತಿಯ ಕೇಂದ್ರ ಸ್ಥಳ ಹಾಗೂ ಪ್ರಜಾಪ್ರಭುತ್ವ ಹೊಂದಿದ ರಾಜ್ಯ..
- ಸರ್ಕಾರದ ಪ್ರಮುಕ ಉದ್ದೇಶ ನಾಗರೀಕರ ಸರ್ವತೋಮುಕ ಅಭಿವೃದ್ಧಿ ಹಾಗೂ ದೈಹಿಕ ಸಾಮರ್ಥ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತದ್ದರು.
- ಹುಟ್ಟಿದ ಮಗುವನ್ನು ಪರೀಕ್ಷಿಸುತ್ತಿದ್ದರು. ಮಗು ಆರೋಗ್ಯ ಹೀನವಗಿದ್ದರೆ ಪಾಲಕರಿಂದಲೇ ಅವನತಿ ನೀಡಲಾಗುತ್ತಿತ್ತು.

## ಅಥೇನ್ಸ್ ನಾಗರೀಕರ ಜೀವನಕ್ಕೆ ಸಂಬಧಿಸಿದ ವಿವಿಧ ಹಂತಗಳು:

### ಬಾಲ್ಯ ಜೀವನ – ( ಹುಟ್ಟಿನಿಂದ 7 ವರ್ಷದವರೆಗೆ ):

- ಈ ಅವಧಿಯಲ್ಲಿ ಮಗು ಪಾಲಕರ ಪೋಷಣೆಯಲ್ಲಿಯೇ ಬೆಳೆಯುತ್ತಿತ್ತು.
- ಪಾಲಕರು ಪ್ರೀತಿ ವಾತ್ಸಲ್ಯ ತೋರದೆ, ಅಧಿಕಾರಿಗಳಂತೆ ಮಕ್ಕಳ ನಿರ್ವಹಣೆ ಮಾಡಬೇಕಾಗಿತ್ತು.
- ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪ್ರಾಥಮಿಕ ಶಿಕ್ಷಣ ನೀಡುತ್ತಿದ್ದರು. ಗಾಳಿಪಟ ಹಾರಿಸುವುದು, ಕಪ್ಪೆಯಂತೆ ಜಿಗಿಯುವುದು, ಬುಗರಿ ಆಟ, ಚಿಟ್ಟೆ ಹಾರಿಸುವುದು, ಕಣ್ಣಾಮುಚ್ಚಾಲೆ ಮೊದಲಾದ ಮನರಂಜನೆಯ ಆಟಗಳನ್ನು ಆಡುತ್ತಿದದರು.
- ಉತ್ತಮ ನಾಗರೀಕನಾಗಲು ಬೇಕಾದ ಅಂಶಗಳನ್ನು (ನೀತಿಕಥೆ) ಕಲಿಸುತ್ತಿದ್ದರು.

## ವಿದ್ಯಾರ್ಥಿ ಜೀವನ – (7 ವರ್ಷದಿಂದ 18 ವರ್ಷದವರೆಗೆ )

- ಏಳು ವರ್ಷದಿಂದ ಬಾಲಕರು ಪ್ಯಾಲೆಸ್ಟ್ರಿಯಾ ಶಾಲೆಗೆ ಕುಸ್ತಿ, ಜಿಗಿತ ಓಟ, ಚಕ್ರ ಹಾಗೂ ಭಲ್ಲೆ ಎಸೆತ, ಮುಷ್ಠಿಯುದ್ಧ ಮುಂತಾದ ಚಟುವಟಿಕೆಗಳ ತರಬೇತಿಯ ಬಗ್ಗೆ ಶಿಕ್ಷಣ ನೀಡುತ್ತಿದ್ದರು.
- ಪ್ಯಾಲೆಸ್ಟ್ರಿಯಾ ದಲ್ಲಿ ಶಾರೀರಿಕ ತರಬೇತಿಗೆ ಅನುಕೂಲವಾಗುವಂತ ಸಲಕರಣಾ ಕೋಣೆ, ಸ್ನಾನದ ಕೋಣೆ, ಮನೋಲ್ಲಾಸದ ಕೋಣೆ, ಮುಂತಾದ ಕೋಣೆಗಳನ್ನು ನಿರ್ಮಾಣ ಮಾಡುತ್ತಿದ್ದರು.
- ಶಾಲೆಗಳ ವ್ಯವಸ್ಥಾಪಕರೇ ದೈಹಿಕ ಶಿಕ್ಷಣ ಶಿಕ್ಷಕರಾಗುತ್ತಿದ್ದರು.
- ದೀದ್ಯಾಸ್ಕಲಂ ಈ ಶಾಲೆಗಳಲ್ಲಿ ಸಂಗೀತ (ನಾಟ್ಯ, ಶಾಸ್ತ್ರೀಯ ಸಂಗೀತ, ಪೀಟಿಲು, ವೀಣೆ. ಹಾರ್ಮೋನಿಯಂ) ಹಾಗೂ ವ್ಯಾಕರಣ ಕಲಿಯುತ್ತದ್ದರು.
- ಪ್ಯಾಲೆಸ್ಟ್ರಿಯಾ ಮತ್ತು ದೀದ್ಯಾಸ್ಕಲಂ ಈ ಎರಡು ಶಾಲೆಗಳಲ್ಲಿ ಅಥೇನ್ಸ್ ನ ಬಾಲಕರಿಗೆ 14 ನೇ ವಯಸ್ಸಿನವರೆಗೆ ಪ್ರಾಥಮಿಕ ಹಂತದ ಪೂರ್ತಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ನಂತರ ಸ್ವಂತ ಖರ್ಚಿನಿಂದ ಹೆಚ್ಚಿನ ವ್ಯಾಸಾಂಗಕ್ಕೆ ಆಸಕ್ತಿ ಹೊಂದಿದ ಬಾಲಕರಿಗೆ 18ನೇ ವಯಸ್ಸಿನವರೆಗೆ ವ್ಯಾಸಾಂಗ ಮಾಡಲು ಅವಕಾಶ ನೀಡಲಾಗುತ್ತಿತ್ತು.

## ಸೈನಿಕ ಜೀವನ – (18 ವರ್ಷದಿಂದ 20 ವರ್ಷದವರೆಗೆ )

- ವಿದ್ಯಾರ್ಥಿ ಜೀವನದ ನಂತರ 18 ನೇ ವರ್ಷಕ್ಕೆ ಕಡ್ಡಾಯವಾಗಿ **ಎಫೆಬಸ್** ಎಂಬ ಸೈನಿಕ ದಳಕ್ಕೆ ಸೇರಬೇಕಾಗಿತ್ತು .
- ರಾಜ್ಯದ ರಕ್ಷಣೆಗಾಗಿ ತಾನು ಸೇವೆಮಾಡುವುದಾಗಿ ಮತ್ತು ಕಾನೂನು ಬಾಹಿರನಾಗಿ ನಡೆಯುವುದಿಲ್ಲವೆಂದು ಪ್ರತಿಯೋಬ್ಬರು ಪ್ರತಿಜ್ಞೆ ಮಾಡಬೇಕಾಗಿತ್ತು.
- ಆಯುಧಗಳ ತರಬೇತಿ, ಬಿಲ್ಲುಗಾರಿಕೆ, ಕತ್ತಿವರೆಸೆ, ರಥದ ಓಟ ತರಬೇತಿ ನೀಡುತ್ತಿದ್ದರು.
- ಯುದ್ಧ  ಸಂಭವಿಸಿದರೆ ಭಾಗವಹಿಸಲು ಯುದ್ಧಭೂಮಿಗೆ ಕಳುಹಿಸಲಾಗುತ್ತಿತ್ತು. ಹೀಗೆ 20 ನೇ ವಯಸ್ಸಿನವರೆಗೆ ಸೈನಿಕ ಜೀವನ ಕಡ್ಡಾಯವಾಗಿತ್ತು. ನಂತರ ನಾಗರೀಕ ಜೀವನಕ್ಕೆ ಪ್ರವೇಶ ಪಡೆಯುತ್ತಿದ್ದರು.

## ನಾಗರೀಕ ಜೀವನ – (20 ವರ್ಷದಿಂದ ಜೀವಿತಾವಧಿವರೆಗೆ)

- ಈ ಹಂತದಲ್ಲಿ ಯುವಕರು ಸ್ವತಂತ್ರ ನಾಗರಿಕರಾಗಿ ಅಸೆಂಬ್ಲಿಯ ಸದಸ್ಯತ್ವ ವನ್ನು ಪಡೆದುಕೊಂಡು ತಮ್ಮ ಜೀವನೋಪಾಯಕ್ಕಾಗಿ ಯಾವುದೇ ಪ್ರಕಾರದ ವೃತ್ತಿ ಚಟುವಟಿಕೆಳಲ್ಲಿ ತೊಡಗಿಸಿಕೊಳ್ಳಬಹುದಾಗಿತ್ತು.
- ಆದರೆ ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳಲು ವ್ಯಾಯಾಮ ಮಂದಿರಗಳಿಗೆ ಹೋಗಬೇಕಾಗುತ್ತಿತ್ತು. (ಲ್ಯಾಕ್ಯೂಮ್ ಅಕಾಡೆಮಿ & ಸೈನಾಸಾರ್ಗಸ್)